ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ.296/2018 ,

ಚಾಸಾ-8, ಪ್ರಾಸಾ -8

| | |
|---|---|
| ಹೆಸರು | ಸುರೇಶ್ ಆಚಾರ್ಯ |
| ತಂದೆಯ ಹೆಸರು | ವೆಂಕಟೇಶ್ ಆಚಾರ್ಯ |
| ವಯಸ್ಸು | 45 ವರ್ಷ |
| ಕೆಲಸ | ಪೆಟ್ರೋಲ್ ಪಂಪ್ ನಲ್ಲಿ ಕೆಲಸ |
| ವಾಸ | ಮೂಡಬಿದ್ರೆ |
| ಪ್ರಮಾಣೀಕರಿಸಿದ ದಿನಾಂಕ | 21-07-2025 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. ಪೋಲಿಸರು ನನ್ನು ಈ ಪ್ರಕರಣಕ್ಕೆ ಸಂಬಂಧಿಸಿಂದತೆ ಠಾಣೆಗೆ ಕರೆದದಿರುತ್ತಾರೆ. ನಂತರ ಪ್ರಕರಣದದಲ್ಲಿ ಆಭರಣವನ್ನು ತೂಕ ಮಾಡುವ ಸಲುವಾಗಿ ನನ್ನನ್ನು ಕೋರಿಕೊಂಡಿರುತ್ತಾರೆ. ಪೋಲಿಸ್ ಠಾಣೆಯಿಂದ ಆರೋಪಿ ಹಾಗೂ ಪೋಲೀಸರೊಂದಿಗೆ ಆರೋಪಿ ಮನೆಯಾದ ತೋಡಾರಿಗೆ ಹೋಗಿರುತ್ತೇನೆ. ಆಗ ಆರೋಪಿಯ ಮನೆಯ ಕೊಟ್ಟಿಗೆಯಲ್ಲಿ ಬಟ್ಟೆಯ ತುಂಡಿನಲ್ಲಿ ಗಂಟು ಕಟ್ಟಿದ ಆಭರಣಗಳನ್ನು ಆರೋಪಿ ತೋರಿಸಿದ ಮೆರೆಗೆ ಅದನ್ನು ತೆಗೆದು ನೋಡಲಾಗಿ ಹಲವಾರು ಬಗೆಯಆಭರಣಗಳು ಚಿನ್ನದ ಚೈನ ಮತ್ತು ಬಳೆ, ಪೆಂಡೆಂಟ್, ಉಂಗುರ, ಜೋಮಾಲೆ, ಕಿವಿ ಬೆಂಡೋಲೆ, ಜುಮ್ಕಿ , ಇನ್ನೀತರ ಆಭರಣಗಳಿದ್ದವು. ಸದರಿ ಆಭರಣಗಳನ್ನು ನಾನು ತೂಕ ಮಾಡಿದ್ದು, ಅವುಗಳ ತೂಕವನ್ನು ನಾನು ಹೇಳದಪ್ರಕಾರ ಪೋಲಿಸರು ಬರೆದಿರುತ್ತಾರೆ.

ಆ ಸಮಯದಲ್ಲಿ ಪೋಲಿಸರು ಮತ್ತು ನನ್ನನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ನಂತರ ಕೈಕಂಬದಲ್ಲಿರುವ ಜುವೇಲರ್ಸ್ ಹೋಗಿ ಅಲ್ಲಿ ಸಹ ಚಿನ್ನವನ್ನು ಸ್ವಾಧೀನಪಡಿಸಿಕೊಳ್ಳುವ ಸಂಧರ್ಭದಲ್ಲಿ ಸ್ವತ್ತು ಸ್ವಾಧೀನ ಮಹಜರನ್ನು ಮಾಡಲಾಯಿತು. ಆಗಲೂ ಆಭರಣಗಳನ್ನು ತೂಕ ಕೊಟ್ಟಿರುತ್ತೇನೆ. ಸದರಿ ಸಮಯದಲ್ಲಿ ಸಣ್ಣ ಮಗುವಿನ ಚೈನ್, ನೆಕಲೇಸ್, ಇತರೇ ಬೇರೆ ಆಭರಣಗಳನ್ನು ಕೂಡ ಇದ್ದವು. ಅವುಗಳನ್ನು ತೂಕ ಮಾಡಿರುತ್ತೇನೆ. ಆ ಸಮಯದಲ್ಲಿ ಆರೋಪಿ ಹಾಗೂ ಅಂಗಡಿಯ ಮಾಲೀಖರಿದ್ದರು. ಸದರಿ ಆಭರಣಗಳನ್ನು ಪೋಲಸರು ಸ್ವಾಧೀನಪಡಿಸಿರುತ್ತಾರೆ. ಮಹಜರನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆವರೆಗೆ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಸಾಕ್ಷಿ ನಿಪಿ-4 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ಈ ಬಗ್ಗೆ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ನಿಪಿ-5 ಫೋಟೋವನ್ನು ನೋಡಿ ಗುರುತಿಸಿರುತ್ತಾರೆ .

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

ದಿನಾಂಕ 18-11-2017 ರಂದು ಆರೋಪಿ ಮನೆಯಲ್ಲಿ ಮಹಜರನ್ನು ಸಮಯ 12.30 ಗಂಟೆಯಿಂದ 1.30 ಗಂಟೆ ತನಕ ಮಾಡಿದರು ಎಂದರೆ ಸರಿ. ಆ ಸಮಯ ನನ್ನ ಹಾಗೂ ಚಾಸಾ-7 ಮತ್ತು ಚಾಸಾ-11 ರವರಿದ್ದರು ಎಂದರೆ ಗೊತ್ತಿಲ್ಲ.

<u>ಪಾಟೀಸವಾಲುಃ ಶ್ರೀ ಎಸ್.ಎಸ್.ಡಿ. ವಕೀಲರಿಂದಃ-</u>

ತೋಡಾರು ಜಂಕ್ಷನ್‌ನಲ್ಲಿ ಮೂಡಬಿದ್ರಿ ಯಿಂದ ಮಂಗಳೂರಿಗೆ ಹೋಗುವ ಎಡ ಬದಿಯಲ್ಲಿ ಆರೋಪಿಯ ಮನೆಗೆ ಹೋಗಿರುತ್ತೇವೆ.

ಆರೋಪಿಯ ಮನೆಗೆ ಹೋದಾಗ ಪೋಲಿಸರ ಜೊತೆ ಕೊಟ್ಟಿಗೆಗೆ ಹೋಗಿರುತ್ತೇವೆ. ಪೋಲಿಪಿಸರು ಚಿನ್ನವನ್ನು ತೆಗೆಂದುಕೂಂಡು ಬಂದಾಗ ನಾವು ಅಂಗಳದಲ್ಲಿದ್ದೆವು. ತೂಕ ಮಾಡಿದ ಚಿನ್ನ ವನ್ನು ಪೋಲಪಿಸರು ಅಂಗಳದಲ್ಲಿ ಕ್ಯೇಯಲ್ಲಪಿ ಬರೆದುಕೊಂಡಿರುತ್ತಾರೆ. ಕೈಯಲ್ಲಿ ಬರೆದುಕೊಂಡ ನಂತರ ನನ್ನ ಹಾಗೂ ಇಬ್ಬರು ವ್ಯಕ್ತಿಯ ಸಹಿಯನ್ನು ಪಡೆದುಕೊಂಡಿರುತ್ತಾರೆ. ಅಂಗಳದಲ್ಲಿ ಸಹಿ ಹಾಕುವ ಸಮಯ ಎಷ್ಟಾಗಿತ್ತು ಎಂದರೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಮುಂದುವರಿದು ಅಂದಾಜು 10 ರಿಂದ ಬೆಳಗ್ಗೆ 11 ಗಂಟೆ ಆಯಿತು. ಅಲ್ಲಿಂದ ನೇರವಾಗಿ ಸುಶೀಲ ಜ್ಯುವೇಲರ್ಸ್ ಗೆ ಹೋಗಿರುತ್ತೇವೆ. ಸುಶೀಲ ಜ್ಯುವೇಲರ್ಸ್ ತಲುಪುವಾಗ ಸುಮಾರು 12 ಗಂಟೆ ಆಗಿರಬಹುದು. ಅಲ್ಲಯೂ ಕೂಡ ಪೋಲೀಸರು ಜ್ಯುವೇಲರ್ಸ್ ಒಳಗೆ ಹೋಗಿ ಬಂಗಾರವನ್ನು ತೆಗೆದುಕೊಂಡು ಬಂದರು. ಆ ಎಲ್ಲಾ ಬಂಗಾರವನ್ನು ಅಂಗಡಿಯಲ್ಲಿಯೇ ನಾನೇ ತೂಕ ಮಾಡಿ ಪೋಲಿಸರಿಗೆ ಹೇಳಿರುತ್ತೇನೆ. ಪೋಲೀಸರು ಅದನ್ನು ಕೈಯಲ್ಲಿ ಬರೆದು ನನ್ನ ಮತ್ತು ಆರೋಪಿಯ ಅಂಗಳದಲ್ಲಿ ಸಹಿ ಹಾಕಿದ ಇನ್ನಿಬ್ಬರು ವ್ಯಕ್ತಿಯ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಹಿಯನ್ನು ಪಡೆದುಕೊಳ್ಳುವಾಗ ಒಂದುವರೆಯಿಂದ 2 ಗಂಟೆಗಳ ಕಾಲ ಇದ್ದೆವು. ಆರೋಪಿಯ ಅಂಗಳದಲ್ಲಿ ತೂಕ ಮಾಡಿದ ಬಂಗಾರ ಮತ್ತು ಸುಶೀಲ ಜ್ಯುವೇಲರ್ಸ್ ನಲ್ಲಿ ತೂಕ ಮಾಡಿದ ಬಂಗಾರ ಎರಡನ್ನೂ ಹಿಡಿದುಕೊಂಡು ಬಂದು ಠಾಣೆಯಲ್ಲಿ ತೂಕ ಮಾಡಿ ಅಲ್ಲಿ ಪೋಲಿಸರು ಟೈಪ್ ಮಾಡಿ ನಿಪಿ-4 ರಂತೆ ಕ್ಕೆ ಸಹಿಯನ್ನು ಪಡೆದುಕೊಂಡಿರುತ್ತಾರೆ. ಆರೋಪಿಯ ಮನೆಯ ಅಂಗಳದಲ್ಲಿ ಮತ್ತು ಸುಶೀಲ ಜ್ಯುವೇಲರ್ಸ್ ನಲ್ಲಿ ತೂಕ ಮಾಡಿದ ಆಭರಣಗಳು ಮತ್ತು ಅವುಗಳ ತೂಕ ಎಷ್ಟು ಎಂದು ಈಗ ಹೇಳಲು ಸಾಧ್ಯವಾಗುವುದಿಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಸ್ಥಳಗಳಿಗೆ ಆಭರಣಗಳನ್ನು ತೂಕ ಮಾಡಲು ಹೋಗಲೇ ಇಲ್ಲ ಎಂದರೆ ಸರಿಯಲ್ಲ.

ಸದರಿ ಸ್ಥಳಗಳಲ್ಲಿ ಯಾವುದೇ ಒಡವೆಗಳು ಸಿಗಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾ.ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ